**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | **:** | **ರಮೇಶ** | **ದೋ.ಸಾ. 10** |
| **ತಂದೆಯ ಹೆಸರು** | **:** | **ಝುರೇಪ್ಪ** | **ಪ್ರಾ.ಸಾ.  6** |
| **ವಯಸ್ಸು** | **:** | **51 ವರ್ಷ** | **ದಿನಾಂಕಃ 29-11-2023** |
| **ಉದ್ಯೋಗ** | **:** | **ಪಿ.ಡಿ.ಒ.** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

2013 ರಿಂದ ಸೆಪ್ಟಂಬರ-2018 ರವರೆಗೆ ನಾನು ಪೊಲಕಪಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿಯಾಗಿ ಕೆಲಸ ಮಾಡಿದ್ದೇನೆ.

ಈ ಪ್ರಕರಣದ ಆರೋಪಿ ನನಗೆ ಗೊತ್ತು.  ಸದರಿ ಆರೋಪಿ ಚಿಂಚೋಳಿ ತಾಲೂಕು ಪಂಚಾಯತ್ ಕಾರ್ಯಲಯದಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದರು.

ಅದೇ ರೀತಿ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ನನಗೆ ಗೊತ್ತು. ಚಾಸಾ-1 ನನ್ನ ಮೇಲಾಧಿಕಾರಿಯಾಗಿದ್ದರು. ಚಾಸಾ-9 ಮತ್ತು 11 ರಿಂದ 18 ರವರು ಗೊತ್ತು.  ಸದರಿಯವರೆಲ್ಲರು ತಲೂಕು ಪಂಚಾಯತಿಯ ಸರ್ಕಾರಿ ನೌಕರರು.

2014 ನೇ ಇಸವಿಯಲ್ಲಿ ಒಂದು ನಾನು ನನ್ನ ಸ್ವಂತ ಕೆಲಸ ನಿಮಿತ್ತ ಚಿಂಚೋಳಿಯಲ್ಲಿರುವ ತಾಲೂಕು ಪಂಚಾಯತಿ ಕಚೇರಿಗೆ ಹೋಗಿದ್ದೆ.  ಸದರಿ ಕಚೇರಿಯಲ್ಲಿ ಎಸ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದ ಮತ್ತು ಈಗ ಮೃತಪಟ್ಟಿರುವ ಚಾಸಾ-13 ರವರ ಬಳಿ ನನ್ನ ಕೆಲಸವಿದಿದ್ದರಿಂದ ನಾನು ಅವರನ್ನು ಭೇಟಿಯಾದಾಗ ಸದರಿಯವರು ನನಗೆ ಈ ಪ್ರಕರಣದ ಆರೋಪಿ ಶಿವಶರಣಪ್ಪ ತಾಲೂಕು ಪಂಚಾಯತಿ ವತಿಯಿಂದ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ವಿತರಿಸಬೇಕಾದ ಭತ್ಯೆಯ ಸಂಬಂಧ ಕೊಡಲಾದ ಎರಡು ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಅವ್ಯವಹಾರ ನಡೆಸಿದ್ದಾನೆಂದು ನನಗೆ ತಿಳಿಸಿರುತ್ತಾರೆ. ಸದರಿ ಅವ್ಯವಹಾರದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಮತ್ತು ಸದರಿ ವಿಚಾರ ಚಾಸಾ-13 ರವರು ನನಗೆ ಹೇಳಿದ  ಮೇರೆಗೆ ಗೊತ್ತಾಗಿರುತ್ತದೆ.  ಚಾಸಾ-13 ರವರು ನನಗೆ ಹೇಳಿದ ಪ್ರಕಾರ ಆರೋಪಿ ತರಬೇತಿ ಕಾರ್ಯಕ್ರಮಕ್ಕೆ

ಬಿಡುಗಡೆಯಾಗಿದ್ದ ಅನುದಾನ ಪೈಕಿ ರೂ.80000/- ಗಳನ್ನು ವಂಚಿಸಿರುತ್ತಾನೆ ಎಂದು ನನಗೆ ಗೊತ್ತಾಗಿರುತ್ತದೆ. ಸದರಿ ವಂಚನೆ 2014 ನೇ ಸಾಲಿನಲ್ಲಿ ನಡೆದಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ.

ನಾನು ತಾಲೂಕು ಪಂಚಾಯತಿ ಕಚೇರಿಗೆ ಹೋಗಿದ್ದಾಗ ಅಲ್ಲಿ ಪೊಲೀಸರು ಇದ್ದರು ಮತ್ತು ಸದರಿಯವರು ನನ್ನ ಹೆಸರು, ವಿಳಾಸ ಪಡೆದುಕೊಂಡು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ಸೇರಿಸಿರುತ್ತಾರೆ. ಪೋಲೀಸರು ಈ ಪ್ರಕರಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**</u>

2014 ನೇ ಸಾಲಿನಲ್ಲಿ ಚಿಂಚೋಳಿ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಉಪಗೃಹ ತರಬೇತಿ ಶಾಖೆಯ ತರಬೇತಿ ಪ್ರಭಾರವನ್ನು ಆರೋಪಿ ಶಿವಶರಣಪ್ಪ ನಿರ್ವಹಿಸುತ್ತಿದ್ದರು ಎಂದರೆ ಸರಿ.

ಸದರಿ ತರಬೇತಿಗೆ ತಗಲುವ ಖರ್ಚು ವೆಚ್ಚಕ್ಕಾಗಿ ಪಂಚಾಯತಿಯಿಂದ ದಿನಾಂಕ 30-07-2014 ರಂದು ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ಸೇರಿದ 280996 ರ ರೂ.5,690/- ರ ಚೆಕ್ಕನ್ನು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಚಾಸಾ-1 ಮತ್ತು ಸಹಾಯಕ ಲೆಕ್ಕಾಧಿಕಾರಿಗಳಾದ ಚಾಸಾ-12 ರವರು ಜಂಟಿಯಾಗಿ ಸಹಿ ಮಾಡಿ ಆರೋಪಿಗೆ ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿದ ಆರೋಪಿ ರೂ.5,690/- ರೂಪಾಯಿ ಎಂದು ಬರೆದಿರುವ ಕಡೆ 4 ಎಂಬ ಅಂಕಿಯನ್ನು ಸೇರಿಸಿ ಒಟ್ಟು ರೂ.45,690/- ಗಳಿಗೆ ಚೆಕ್ಕು ಕೊಟ್ಟಿರುವಂತೆ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲಿ ನಲವತ್ತೈದು ಸಾವಿರದ ಆರು ನೂರಾ ತೊಂಬತ್ತು ಎಂದು ಬರೆದುಕೊಂಡು ಸದರಿ ಚೆಕ್ಕನ್ನು ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಸದರಿ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಚಾಸಾ-13 ರವರು ಅದನ್ನು ನನಗೆ ತಿಳಿಸಿದರು ಎನ್ನುತ್ತಾರೆ.

ಅದೇ ರೀತಿ ದಿನಾಂಕ 09-09-2014 ರಂದು ಚಾಸಾ-1 ಮತ್ತು ಚಾಸಾ-12 ರವರ ಜಂಟಿ ಸಹಿ ಇದ್ದ ಚೆಕ್ ನಂ.280997 ನ್ನು ತರಬೇತಿ ಖರ್ಚು ವೆಚ್ಚಕ್ಕಾಗಿ ತಗಲುವ ರೂ.6,150/- ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿ ಆರೋಪಿ, ರೂ.6,150/- ಎಂದು ಬರೆದಿರುವ ಕಡೆ 4 ಎಂಬ

ಅಂಕಿಯನ್ನು ಸೇರಿಸಿ ಒಟ್ಟು ರೂ.46,150/- ಗಳಿಗೆ ಚೆಕ್ಕು ಕೊಟ್ಟಿರುವ ರೀತಿ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲೂ ನಲವತ್ತಾರು ಸಾವಿರದ ನೂರಾ ಐವತ್ತು ಎಂದು ತಿದ್ದುಪಡಿ ಮಾಡಿ ಸದರಿ ಚೆಕ್ಕನ್ನೂ ಸಹ ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಸದರಿ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಚಾಸಾ-13 ರವರು ಅದನ್ನು ನನಗೆ ತಿಳಿಸಿದರು ಎನ್ನುತ್ತಾರೆ.

ಮೇಲೆ ಉಲ್ಲೇಖಿಸಲಾದ ಎರಡು ಬ್ಯಾಂಕ್ ಚೆಕ್ಕುಗಳನ್ನು ನಮ್ಮ ಪಂಚಾಯತಿ ಬ್ಯಾಂಕ್ ಖಾತೆ ನಂ.2059049568 ರಿಂದ ಆರೋಪಿಗೆ ತರಬೇತಿ ವೆಚ್ಚಕ್ಕಾಗಿ ತಲಾ ರೂ.5,690/- ಮತ್ತು ರೂ.6,150/- ರೂ.ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕುಗಳನ್ನು ಮೇಲೆ ಹೇಳಿದಂತೆ ತಿದ್ದುಪಡಿ ಮಾಡಿಕೊಂಡಿದ್ದ ಆರೋಪಿ ತನ್ನ ವಯಕ್ತಿಕ ಬ್ಯಾಂಕ್ ಖಾತೆ ಸಂಖ್ಯೆ 11059100009766 ಕ್ಕೆ ಜಮಾ ಮಾಡಿಕೊಂಡು ಹೆಚ್ಚುವರಿಯಾಗಿ ರೂ.80,000/- ಸರಕಾರಿ ಹಣವನ್ನು ಸರಕಾರಕ್ಕೆ ವಂಚಿಸಿ ತನ್ನ ಸ್ವಂತ ಖಾತೆಗೆ ಚೆಕ್ಕನ್ನು ನಕಲು ಮಾಡಿ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಸದರಿ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಚಾಸಾ-13 ರವರು ಅದನ್ನು ನನಗೆ ತಿಳಿಸಿದರು ಎನ್ನುತ್ತಾರೆ. ಸರಕಾರಕ್ಕೆ ಮೋಸ ಮಾಡುವ ಮಾಡುವ ಉದ್ದೇಶದಿಂದ ಆರೋಪಿ ಚಾಸಾ-1 ಮತ್ತು ಚಾಸಾ-12 ರವರ ಜಂಟಿ ಸಹಿಗಳು ಇದ್ದ ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಸರಕಾರಿ ಹಣವನ್ನು ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಸದರಿ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಚಾಸಾ-13 ರವರು ಅದನ್ನು ನನಗೆ ತಿಳಿಸಿದರು ಎನ್ನುತ್ತಾರೆ.

ಮೇಲ್ಕಂಡಂತೆ ಆರೋಪಿ ನಮ್ಮ ಇಲಾಖೆಗೆ ಮತ್ತು ಸರಕಾರಕ್ಕೆ ವಂಚಿಸಿರುವ ವಿಚಾರ 2015 ನೇ ಸಾಲಿನಲ್ಲಿ ನಮ್ಮ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಬೆಳಕಿಗೆ ಬಂದಿದ್ದು ಈ ಸಂಬಂಧ ದಿನಾಂಕ 21-01-2015 ರಂದು ಚಾಸಾ-1 ರವರು ಚಿಂಚೋಳಿ ಪೋಲೀಸರಿಗೆ ಆರೋಪಿ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ದೂರು ಕೊಟ್ಟಿರುವ ಬಗ್ಗೆ ಗೊತ್ತಾಯಿತು ಎನ್ನುತ್ತಾರೆ.

ದಿನಾಂಕ 05-06-2017 ರಂದು ಈ ಪ್ರಕರಣದ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು ಮತ್ತು ಸದರಿ ಸಂದರ್ಭದಲ್ಲಿ ಆರೋಪಿ ಚಾಸಾ-1 ಮತ್ತು 12 ರವರ ಜಂಟಿ ಸಹಿಗಳಿದ್ದ ಚೆಕ್ಕುಗಳನ್ನು ಮೋಸ ಮಾಡುವ ಉದ್ದೇಶದಿಂದ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸೇರಿದ ರೂ.80000/- ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ವಂಚಿಸಿದ್ದಾನೆ ಮತ್ತು ಸದರಿ ವಂಚನೆ ಕೃತ್ಯ ದಿನಾಂಕ 30-07-2014 ರಿಂದ 09-09-2014 ರ ಅವಧಿಯಲ್ಲಿ ಆಗಿತ್ತು ಎಂದು ನನಗೆ ಚಾಸಾ-13 ರವರಿಂದ ಗೊತ್ತಾಗಿರುತ್ತದೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆಯಿಂದ ನಾನು ಚಾಸಾ-13 ರವರ ಬಳಿ ಹೋದಾಗ ಪೊಲೀಸರು ಅಲ್ಲೇ ಇದ್ದರು ಮತ್ತು ನಾನು

ಯಾವುದೇ ಹೇಳಿಕೆಯನ್ನು ಪೊಲೀಸರಿಗೆ ಕೊಟ್ಟಿಲ್ಲ ಎನ್ನುತ್ತಾರೆ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಪಿ-19 ಎಂದು ಗುರುತಿಸಲಾಯಿತು.

ನಿಪಿ-19 ರಂತೆ ಹೇಳಿಕೆ ಕೊಟ್ಟಿದ್ದರು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಹೇಳಿಕೆ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವಿ. ವಕೀಲರಿಂದಃ</u>**

ಆರೋಪಿ ಚೆಕ್ಕುಗಳನ್ನು ತಿದ್ದುಪಡಿ ಮಾಡಿರುವುದನ್ನು ನಾನು ಕಣ್ಣಾರೆ ಕಂಡಿಲ್ಲ. ಆರೋಪಿ ಸರ್ಕಾರಕ್ಕೆ ವಂಚಿಸಿ ರೂ.80000/- ಹಣವನ್ನು ತನ್ನ ಸ್ವಂತ ಖಾತೆಗೆ ಜಮೆ ಮಾಡಿಕೊಂಡಿರುವ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿ ಅವ್ಯವಹಾರದಲ್ಲಿ ಭಾಗಿಯಾಗಿದ್ದಾನೆಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿ. ಚಾಸಾ-13 ರವರ ಹೇಳಿಕೆ ಮೇರೆಗೆ ಆರೋಪಿ ಅವ್ಯವಹಾರ ಮಾಡಿದ್ದನು ಎಂದು ನನಗೆ ಗೊತ್ತಾಯಿತು ಎಂದು ಈಗ ಸಾಕ್ಷಿ ಹೇಳುತ್ತಿದ್ದೇನೆ ಮತ್ತು ಸದರಿ ಅವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ.

2014 ನೇ ಇಸವಿಯಲ್ಲಿ ಒಂದು ನಾನು ನನ್ನ ಸ್ವಂತ ಕೆಲಸ ನಿಮಿತ್ತ ಚಿಂಚೋಳಿಯಲ್ಲಿರುವ ತಾಲೂಕು ಪಂಚಾಯತಿ ಕಚೇರಿಗೆ ಹೋಗಿದ್ದಾಗ ಚಾಸಾ-13 ರವರು ನನಗೆ ಈ ಪ್ರಕರಣದ ಆರೋಪಿ ಶಿವಶರಣಪ್ಪ ತಾಲೂಕು ಪಂಚಾಯತಿ ವತಿಯಿಂದ ಆಯೋಜಿಸಲಾಗಿದ್ದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ವಿತರಿಸಬೇಕಾದ ಭತ್ಯೆಯ ಸಂಬಂಧ ಕೊಡಲಾದ ಎರಡು ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಅವ್ಯವಹಾರ ನಡೆಸಿದ್ದಾನೆಂದು ನನಗೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-13 ರವರು ನನಗೆ ಹೇಳಿದ ಪ್ರಕಾರ ಆರೋಪಿ ತರಬೇತಿ ಕಾರ್ಯಕ್ರಮಕ್ಕೆ ಬಿಡುಗಡೆಯಾಗಿದ್ದ ಅನುದಾನ ಪೈಕಿ ರೂ.80000/- ಗಳನ್ನು ವಂಚಿಸಿರುತ್ತಾನೆ ಎಂದು ನನಗೆ ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**